ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ- 04, ಭೂತರಾಮನಹಟ್ಟಿ, ಬೆಳಗಾವಿ - 591156
(ನ್ಯಾಕ್ ಮಾನ್ಯತೆ B+ ಗ್ರೇಡ್ - 2021) PM-USHA (MERU)

पीएम-उषा PM-USHA

RANI CHANNAMMA UNIVERSITY
Vidyasangama, National Highway - 04, Bhootaramanahatti, Belagavi - 591156
(NAAC Accredited with B+ Grade - 2021) PM-USHA (MERU)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar

ಸಂ: ರಾಚವಿ/ಬೆಳಗಾವಿ/ಕುಸಕಾ/2026-27/ 99 ದಿನಾಂಕ: - 7 APR 2026

## ಆದೇಶ

**ವಿಷಯ:** "ಮನೆ ಮನೆಗೆ, ಮನ ಮನಕೆ ಬಾಬಾಸಾಹೇಬರು" ಅಭಿಯಾನವನ್ನು ಅಂಬೇಡ್ಕರ್ ಜಯಂತಿಯಂದು ಎಲ್ಲಾ ಮಹಾವಿದ್ಯಾಲಯಗಳಲ್ಲಿ ಆಯೋಜಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16-03-2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ವತಿಯಿಂದ "ಮನೆ ಮನೆಗೆ, ಮನ ಮನಕೆ ಬಾಬಾಸಾಹೇಬರು" ಎಂಬ ಅಭಿಯಾನವನ್ನು ವಿಶ್ವವಿದ್ಯಾಲಯದ ಸಂಯೋಜಿತ ಎಲ್ಲಾ ಮಹಾವಿದ್ಯಾಲಯಗಳಲ್ಲಿ (ಘಟಕ ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳನ್ನು ಒಳಗೊಂಡತೆ) ಡಾ. ಬಿ. ಆರ್. ಅಂಬೇಡ್ಕರ್ ಜಯಂತಿಯಂದು ಆಯೋಜಿಸಲು ಈ ಮೂಲಕ ತಿಳಿಸಲಾಗಿದೆ. ಇದರ ಕುರಿತು ಒಂದೆರಡು ದಿನಗಳಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಪ್ರಾಚಾರ್ಯರ Online ಸಭೆಯನ್ನು ಕರೆಯಲಾಗುವುದು. ಈ ಅಭಿಯಾನದ ಅಂಗವಾಗಿ ವಿಶ್ವವಿದ್ಯಾಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠವು ಪ್ರಕಟಿಸಲಿರುವ "ಮನೆ ಮನೆಗೆ, ಮನ ಮನಕೆ ಬಾಬಾಸಾಹೇಬರು" ಎಂಬ ಕಿರುಪುಸ್ತಕವನ್ನು ಈ ತಿಂಗಳ ಒಳಗಾಗಿ ತಮ್ಮ ಮಹಾವಿದ್ಯಾಲಯದ ಪ್ರತಿಯೊಂದು ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿ ಹಾಗೂ ಸಂಶೋಧನಾರ್ಥಿಗೆ ವಿಶ್ವವಿದ್ಯಾಲಯವು ನಿಗದಿಪಡಿಸಲಿರುವ ರಿಯಾಯಿತಿ ದರದಲ್ಲಿ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರುಗಳು ವಿತರಿಸಿ, ಆಕರಿಸಿರುವ ಮೊತ್ತವನ್ನು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠದ Dr. B. R. Ambedkar Adhyaan Peetha (Canara Bank), ಖಾತೆ ಸಂಖ್ಯೆ: 05522200034775, IFSC: CNRB0010552 ಗೆ ಜಮಾ ಮಾಡಲು ಈ ಮೂಲಕ ಆದೇಶಿಸಲಾಗಿದೆ.

ಸದರಿ ಅಭಿಯಾನಕ್ಕೆ ಕುರಿತಂತೆ ಎಲ್ಲಾ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಬೇಕಾಗಿರುವ ಮಾಹಿತಿ ಒದಗಿಸುವುದರ ಜೊತೆಗೆ ಎಲ್ಲಾ ಮಹಾವಿದ್ಯಾಲಯಗಳಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಹಾಗೂ ಅಭಿಯಾನವನ್ನು ಯಶಸ್ವಿಯಾಗಿ ಆಯೋಜಿಸಿ, ಮಹಾವಿದ್ಯಾಲಯಕ್ಕೆ ಒದಗಿಸಲಾಗುವುದು. ಆ ಕಿರು ಪುಸ್ತಕವನ್ನು ಪ್ರತಿಯೊಂದು ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿ ಹಾಗೂ ಸಂಶೋಧನಾರ್ಥಿಗೆ "ಮನೆ ಮನೆಗೆ, ಮನ ಮನಕೆ ಬಾಬಾಸಾಹೇಬರು" ಎಂಬ ಕಿರುಪುಸ್ತಕವನ್ನು ರಿಯಾಯಿತಿ ದರದಲ್ಲಿ ವಿತರಿಸಿ, ಆಕರಿಸಿದ ಮೊತ್ತವನ್ನು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠದ ಮೇಲ್ಕಾಣಿಸಿರುವ ಖಾತೆಗೆ ಜಮಾ ಮಾಡಿರುವುದನ್ನು ಖಾತರಿ ಪಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜಕರಾದ ಡಾ. ಕನಕಪ್ಪಾ ಪೂಜಾರ (ಮೊ:9449575108) ಅವರಿಗೆ ವಹಿಸಲಾಗಿದೆ. ಆದಕಾರಣ, ಡಾ. ಕನಕಪ್ಪಾ ಪೂಜಾರ ಈ ಅಭಿಯಾನದ ಕುರಿತು ಹೊರಡಿಸಲಿರುವ ಸುತ್ತೋಲೆ/ಮಾರ್ಗಸೂಚಿಗಳನ್ನು ಪಾಲಿಸಿ, ಅವರಿಗೆ ಸಂಪೂರ್ಣ ಸಹಕಾರವನ್ನು ನೀಡಿ ಅಭಿಯಾನವನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ತಿಳಿಸಲಾಗಿದೆ.

**ಸಂತೋಷ ಕಾಮಗೌಡ,** ಕೆ.ಎ.ಎಸ್
**ಕುಲಸಚಿವರು**

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**ಇವರಿಗೆ**

ಪ್ರಾಚಾರ್ಯರುಗಳು
ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಮುಂದುವರೆದಿದೆ...2...

**ಪ್ರತಿ ಮಾಹಿತಿಗಾಗಿ:**

1. ಕುಲಪತಿಗಳ ಆಪ್ತ-ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ರಾ.ಚ.ವಿ. ಬೆಳಗಾವಿ
2. ಹಣಕಾಸು ಅಧಿಕಾರಿಗಳು, ರಾ. ಚ. ವಿ. ಬೆಳಗಾವಿ.
3. ನಿರ್ದೇಶಕರು, ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠ, ರಾ.ಚ.ವಿ, ಬೆಳಗಾವಿ.
4. ಉಪಕುಲಸಚಿವರು, ಕುಲಸಚಿವರ ಕಾರ್ಯಾಲಯ, ರಾ.ಚ.ವಿ. ಬೆಳಗಾವಿ.
5. ಡಾ. ಕನಕಪ್ಪಾ ಪೂಜಾರ, ಸಂಯೋಜಕರು, ಎನ್. ಎಸ್. ಎಸ್, ರಾ.ಚ.ವಿ, ಬೆಳಗಾವಿ.
6. ರಕ್ಷಾ ಪ್ರತಿ